ಚಿಟ್ ಕಾಯ್ದೆ ಉಸ್ತುವಾರಿ ಬಗ್ಗೆ

221 (2338) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಟ್ ಕಾಯ್ದೆ ಉಸ್ತುವಾರಿ ಸಹಕಾರ ಇಲಾಖೆಗೆ ಇದೆಯೇ ಅಥವಾ ಇಲ್ಲವೇ?

ಆ) ಅನುಚ್ಛೇದ 81 (ಸೆಕ್ಷನ್ 81)ರ ಅಡಿಯಲ್ಲಿ ರಿಜಿಸ್ಟ್ರಾರ್ ರವರ ಆದೇಶದ ಮೇಲೆ ಮಂತ್ರಿಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆಯೇ ಅಥವಾ ಇಲ್ಲವೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) ಚಿಟ್ ಕಾಯ್ದೆಯು ಕೇಂದ್ರ ಕಾಯಿದೆ ಆಗಿದ್ದು, ಉಪಬಂಧಗಳನ್ನು ರಾಜ್ಯ ಸರ್ಕಾರವು ಸಹಕಾರ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿದೆ.

ಆ) ರಿಜಿಸ್ಟ್ರಾರ್ ಅಥವಾ ನಾಮಿನಿಯು ಮಾಡಿದ ಯಾವುದೇ ಆದೇಶದ ವಿರುದ್ಧ ಕಾಯ್ದೆ ಪ್ರಕರಣ 70 ರನ್ವಯ ರಾಜ್ಯ ಸರ್ಕಾರಕ್ಕೆ ಅಪೀಲು ಮಾಡಲ್ಪಡಬಹುದಾಗಿದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಏನು ಅಧಿಕಾರ ಕೊಟ್ಟಿದ್ದಾರೆ, ಅದರಂತೆ ಸಹಕಾರ ಸಂಘದ ರಿಜಿಸ್ಟ್ರಾರ್‌ರವರು ಶ್ರೀರಾಮ್ ಚಿಟ್ ಫಂಡ್ ಮೇಲೆ 7 ಕೋಟಿ 45 ಲಕ್ಷ ರೂಪಾಯಿಗಳ ದಂಡ ವಿಧಿಸಿದರೆ, ಆ ಸಂಸ್ಥೆಯಲ್ಲಿನ ಒಬ್ಬ ವ್ಯಕ್ತಿ ನಮಗೆ 7 ಕೋಟಿ 45 ಲಕ್ಷ ರೂಪಾಯಿಗಳ ದಂಡ ಹಾಕಿದ್ದಾರೆ ಎಂದು ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದಾನೆ. ಅವನಿಗೆ ನೋಟೀಸ್ ಕೊಟ್ಟಿದ್ದಾರೆ. ರಿಜಿಸ್ಟ್ರಾರ್‌ರವರು, ಅವರು ಮಾಡಿದ ತಪ್ಪನ್ನು ಎತ್ತಿ ಹಿಡಿದಿದ್ದಾರೆ. ಅವನಿಗೆ ನಿಜವಾದ ದಂಡವನ್ನು ಹಾಕಿದ್ದಾರೆ. ಆದರೆ, ಮಾನ್ಯ ಮಂತ್ರಿಗಳು ಏನು ಮಾಡಿದ್ದಾರೆಂದರೆ, ಆ ಮೇಲ್ಮನವಿಯನ್ನು ಸ್ವೀಕರಿಸಿ, ಆ ಮಂತ್ರಿಗಳೂ ಕೂಡ ವಿಚಾರಣೆ ಮಾಡಿದ್ದಾರೆ. ಒಂದು ಅಡ್ಜಿನಿಸ್ಟ್ರೇಷನ್ ಟರ್ಮ್ ವಿಚಾರದಲ್ಲಿ ಸರ್ಕಾರದ ಕಾರ್ಯದರ್ಶಿಗಳೂ ಕೂಡ ಮಂತ್ರಿಗಳಿಗೆ ಹೇಳಿದ್ದಾರೆ. ಆದರೆ ಮಂತ್ರಿಗಳು ತೀರ್ಮಾನ ಮಾಡಿ, ಅವರಿಗೆ 39 ಲಕ್ಷ ರೂಪಾಯಿಗಳ ದಂಡವನ್ನು ಹಾಕಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೆ, ತನಿಖೆ ಮಾಡಿಸುತ್ತಾರೆಯೇ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ. ಇದು ಮಾನ್ಯ ವಿಶ್ವನಾಥ್‌ರವರ ಕಾಲದಲ್ಲಿ ಆಗಿದ್ದು ಅಲ್ಲ. ಇದು 2002ನೇ ಇಸವಿಯಲ್ಲಿ ಆಗಿರುವುದು. ನಾನು ಅವರು, ಇವರ ಎಂದು ಹೇಳುವುದಿಲ್ಲ. ಹಾಲಿ ಇರತಕ್ಕ ಮಾನ್ಯ ವಿಶ್ವನಾಥ್‌ರವರು ಇದರ ಬಗ್ಗೆ ತನಿಖೆ ಮಾಡಿಸಬೇಕು, ಇಲ್ಲವೇ ಮುಖ್ಯಮಂತ್ರಿಗಳು ತನಿಖೆ ಮಾಡಿಸಬೇಕು, ಸರ್ಕಾರಕ್ಕೆ 7 ಕೋಟಿ ರೂ ನಷ್ಟ ಆಗಿದೆ.

ಶ್ರೀ ಹೆಚ್. ವಿಶ್ವನಾಥ್ :- ಸನ್ಮಾನ್ಯ ಅಧ್ಯಕ್ಷರೇ, ಶ್ರೀರಾಮ್ ಚಿಟ್ ಫಂಡ್ಸ್‌ನವರು ಮಂತ್ರಿಗಳಿಗೆ ಅರ್ಜಿ ಕೊಟ್ಟು ಅಪೀಲು ಮಾಡಿದ್ದಾರೆ. ಸಹಕಾರ ಇಲಾಖೆಯ ಮಂತ್ರಿಗಳ ಕೋರ್ಟಿಗೆ ಅಪೀಲು ಮಾಡಿದ್ದಾರೆ. ಈ ಕೋರ್ಟಿಗೆ ಅಪೀಲು ಮಾಡುವಂಥ ಅಧಿಕಾರ ಚಿಟ್ ಫಂಡ್ ಕಾಯಿದೆಯ 70ನೇ ವಿಧಿಯಲ್ಲಿ ನಿಬಂಧಕರು ಮತ್ತು ಅವರ ಪ್ರತಿನಿಧಿ ಏನು ತೀರ್ಮಾನ ಕೊಟ್ಟಿದ್ದಾನೆ, ಆ ತೀರ್ಮಾನದ ವಿರುದ್ಧ ಮೇಲ್ಮನವಿ ಹೋಗುವಂಥ ಅವಕಾಶ 70ನೇ ವಿಧಿಯಲ್ಲಿ ನಮೂದಾಗಿದೆ. ಅದರ ಆಧಾರದ ಮೇಲೆ ಶ್ರೀರಾಮ್ ಚಿಟ್ ಫಂಡ್ಸ್‌ನವರು ತನಗೆ ಹಾಕಿದಂಥ ಭಾರಿ ದಂಡದ ಮೊತ್ತವನ್ನು ಕಡಿಮೆ ಮಾಡಬೇಕೆಂದು ಮಂತ್ರಿಗಳ ಕೋರ್ಟ್ ಮುಂದೆ ಬಂದಾಗ,

ಅದನ್ನು ಅವರು ಕೆಳಗೆ ಇಳಿಸಿದ್ದಾರೆ. ಅವರಿಗಿರತಕ್ಕ ಅಧಿಕಾರದ ಪ್ರಯೋಗದಿಂದ ಇದು ಆಗಿದೆಯೇ ಹೊರತು, ಇಲ್ಲಿ ಅಧಿಕಾರ ದುರುಪಯೋಗ ಆಗಿಲ್ಲ. ಮತ್ತೆ ಇದರ ಮೇಲೆ ವಿಚಾರಣೆ ಮಾಡುವ ಅವಶ್ಯಕತೆ ಅಥವಾ ಅವಕಾಶಗಳು ಇಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಮಂತ್ರಿಗಳು ಮೇಲ್ಮನವಿಯನ್ನು ಸ್ವೀಕರಿಸಿದ್ದಾರೆ, ನಾನು ಅವರ ಅಧಿಕಾರವನ್ನು ಪ್ರಶ್ನೆ ಮಾಡುವುದಿಲ್ಲ. ಅಡ್ಮಿನಿಸ್ಟ್ರೇಷನ್ ಟರ್ಮ್‌ನಲ್ಲಿ ಇಲಾಖೆಯ ಮುಖ್ಯಸ್ಥರು ಏನು ತೀರ್ಮಾನ ಕೊಟ್ಟಿದ್ದಾರೆ, ಅದಕ್ಕೆ 50 ಲಕ್ಷವೋ, ಒಂದು ಕೋಟಿಯೋ ಅಥವಾ ಎರಡು ಕೋಟಿಯೋ ಕಡಿಮೆ ಮಾಡಿದ್ದರೆ ನಮ್ಮದೇನೂ ಅಭ್ಯಂತರ ಇರಲಿಲ್ಲ. ಆದರೆ, 7 ಕೋಟಿ 45 ಲಕ್ಷ ರೂಪಾಯಿಗಳಿಗೆ, ಬರೀ 39 ಲಕ್ಷ ರೂಪಾಯಿಗಳನ್ನು ಮಾತ್ರ ದಂಡ ಹಾಕಿದರೆ, ಇದೇನಿದು? ಇದರ ತನಿಖೆಗೆ ಏಕೆ ಅವಕಾಶ ಇಲ್ಲ, ಇದು ತನಿಖೆಯಾಗಬೇಕಾಗಿದೆ.

ಶ್ರೀ ಹೆಚ್. ವಿಶ್ವನಾಥ್ :- ಇದರ ವಿರುದ್ಧ ಹೈಕೋರ್ಟಿಗೆ ಹೋಗಬಹುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಹೈಕೋರ್ಟಿಗೆ ಹೋಗುವ ವಿಚಾರವನ್ನು ನೀವು ನಮಗೆ ಹೇಳಿಕೊಡಬೇಕಾಗಿಲ್ಲ. ಯಾರಾದರೂ ಜಾಣ ಹೆಡ್ಡರಿಗೆ ಈ ಮಾತನ್ನು ಹೇಳಿ. ಮಾನ್ಯ ಸಗೀರ್ ಅಹಮದ್ ಏನು ಮಾಡತ್ತಾರೆಂದರೆ, ಈ ಜಾಣ ಹೆಡ್ಡರ ಒಂದು ಗುಂಪು ಇಟ್ಟುಕೊಂಡಿದ್ದಾರೆ. ಆ ಜಾಣ ಹೆಡ್ಡರಿಗೆ ಅವರು ಹೇಳುತ್ತಾ ಇರುತ್ತಾರೆ. ಆದ್ದರಿಂದ, ಹೈಕೋರ್ಟಿಗೆ ಹೋಗುವುದನ್ನು ನನಗೆ ಹೇಳುವುದು ಬೇಡ, ಆ ಜಾಣ ಹೆಡ್ಡರಿಗೆ ಹೇಳಲಿ. ನಾವು ದಡ್ಡರೂ ಅಲ್ಲ, ಬುದ್ದಿವಂತರೂ ಅಲ್ಲ, ಮಧ್ಯಮವರ್ಗದವರು. ಸಭ್ಯಾಧ್ಯಕ್ಷರೇ, ದಯವಿಟ್ಟು ಇದನ್ನು ಪ್ರಶ್ನೆ ಎಂದು ಪರಿಗಣಿಸಬೇಡಿ. ಸೆಕ್ರೆಟರಿಯವರು ಸಚಿವರಿಗೆ ಕಡಿಮೆ ಮಾಡುವ ಅಧಿಕಾರ ಇಲ್ಲವೆಂದು ಹೇಳಿದ್ದಾರೆ. ಆಮೇಲೆ, ಸಚಿವರು ಏನಾದರೂ ವಿವರಣೆ ಕೊಟ್ಟಿರಬೇಕೆಂಬುದನ್ನು ನೋಡಿ. ನನ್ನ ಹತ್ತಿರ ಸಚಿವರು ಬರೆದಿರುವಂಥ ರಿಪೋರ್ಟ್ ಇದೆ. ಅವರು ಏನಾದರೊಂದು ಕಾರಣ ಹೇಳಿರಬೇಕಿತ್ತು. ಈ ಕಾರಣದಿಂದ, ನಾವು ಕಡಿಮೆ ಮಾಡಿತ್ತಿದ್ದೇವೆ ಎಂದು ಹೇಳಬೇಕಿತ್ತು. ಈ ಕಾರಣದಿಂದ, ನಾವು ಕಡಿಮೆ ಮಾಡುತ್ತಿದ್ದೇವೆ ಎಂದು ಹೇಳಬೇಕಾಗಿತ್ತು. ಅವರು ಒಂದೆರಡು ಕೋಟಿ ರೂ ಕಡಿಮೆ ಮಾಡಿದ್ದರೆ ಪರವಾಯಿಲ್ಲ. 7 ಕೋಟಿ 45 ಲಕ್ಷ ರೂಪಾಯಿಗಳಲ್ಲಿ ಈ ರೀತಿ ಅತ್ಯಂತ ಕಡಿಮೆ ಮಾಡಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯ್ದರೆ, ಇನ್ನಾರು ನೋಡಬೇಕು ಹೇಳಿ? ಹೆತ್ತ ತಾಯಿಯ ಹಾಲೇ ವಿಷವಾದರೆ ಪ್ರಪಂಚ ಬದುಕುವುದಕ್ಕೆ ಸಾಧ್ಯವೇ? ಮಾನ್ಯ ಸಚಿವರು ಇದರ ಬಗ್ಗೆ ತೇಲಿಸಿ ಉತ್ತರ ಹೇಳಬಾರದು. ಇದರ ಬಗ್ಗೆ ತನಿಖೆಯಾಗಬೇಕು. ಅವರು ಯಾರೇ ಆಗಿರಲಿ, ಅದು ವಿಶ್ವನಾಥ್ ಮಾಡಿದ್ದರೆ, ತನಿಖೆಯಾಗಬೇಕು. ಸಗೀರ್ ಅಹಮದ್‌ರವರು ಹೇಳುವ ಹಾಗೆ ಅರ್ಥ ಬೇರೆ ತರಹ ಇದೆ. ವಿಶ್ವನಾಥ್‌ರವರು ಮಾಡಿದ್ದಾರೆ ಅಂತ. ನಾನು ವಿಶ್ವನಾಥ್‌ರವರು ಮಾಡಿದ್ದಾರೆಂದು ಹೇಳಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ :- ನೋಡಿ, ಅವರು ಸುಮ್ಮಸುಮ್ಮನೆ ನನ್ನ ಹೆಸರನ್ನು ಬಳಸುತ್ತಾರೆ. ನಾನು ಆ ತರಹ ಹೇಳಿದ್ದೇನೆಯೇ?

ಶ್ರೀ ಹೆಚ್. ವಿಶ್ವನಾಥ್ :- ಮಂತ್ರಿಯ ಕೋರ್ಟಿಗೂ ಅಥವಾ ಆರ್.ಸಿ., ಜೆ.ಆರ್.ಸಿ. ಅಥವಾ ಬಿ.ಆರ್.ಸಿ. ಹೀಗೆ ಯಾವುದೇ ಕೋರ್ಟಿನಲ್ಲಿರಲಿ, ಇವು ಕ್ವಾಸಿ ಜ್ಯುಡಿಷಿಯಲ್ ಕೋರ್ಟ್. ಆ ಕ್ವಾಸಿ ಜ್ಯುಡಿಷಿಯಲ್ ಕೋರ್ಟ್‌ನಲ್ಲಾದಂಥ ಜಡ್ಜ್‌ಮೆಂಟಿನದ ಮೇಲೆ ಅತಿಯಾದಂಥ ಪ್ರಸ್ತಾಪ ಕೂಡ ಸಲ್ಲದು. ಅವರಿಗೇನಾದರೂ ಕೂಡ ಇದರಲ್ಲಿ ತಪ್ಪು ಕಂಡುಬಂದಿದ್ದರೆ, ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡುವಂಥ ಅಧಿಕಾರ ಅವರಿಗಿದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ :- ಶ್ರೀರಾಮ್ ಚಿಟ್ ಫಂಡ್‌ನಲ್ಲಿ ಪ್ರತಿ ವಾರ ಆಕ್ಷನ್ ಮಾಡುತ್ತಾರೆ. ವಾಸ್ತವವಾಗಿ ಚಿಟ್ ಫಂಡ್ ಎಂದರೆ, ಯಾರು ಷೇರು ಹೋಲ್ಡರ್ಸ್ ಇರುತ್ತಾರೆ, ಅವರು ಸೇರಿ ಆಕ್ಷನ್ ಮಾಡಬೇಕು. ಅಲ್ಲಿ ಶೇರ್‌ಹೋಲ್ಡರ್ ಅಲ್ಲದೇ ಇರುವವರೂ ಭಾಗವಹಿಸುತ್ತಾ ಇದ್ದಾರೆ. ಪ್ರತಿ ತಿಂಗಳೂ ಕರ್ನಾಟಕದ 4 ರಿಂದ 5 ಕೋಟಿ ರೂ.ಗಳ ವರೆಗೆ ಹೋಗುತ್ತದೆ. ಅವರು ಒಂದೊಂದು ಚಿಟ್‌ಗ್ರೂಪ್‌ನ್ನು ಮಾಡಬೇಕಾದರೂ ಸರಕಾರದಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ಪರ್ಮಿಷನ್ ತೆಗೆದುಕೊಳ್ಳದಿದ್ದ ಕಾರಣ ರಿಜಿಸ್ಟ್ರಾರ್‌ರವರು ಅವರಿಗೆ ದಂಡ ವಿಧಿಸಿದ್ದಾರೆ. ಅಲ್ಲಿ ಎಷ್ಟು ದುರುಪಯೋಗ ಆಗುತ್ತಿದೆ ಅಂದರೆ, ಇಲ್ಲಿ ಒಂದು ಕಡೆ ಸರಕಾರಕ್ಕೆ ಏಳುಕೋಟಿ 45 ಲಕ್ಷ ರೂ.ಗಳ ನಷ್ಟ, ಇನ್ನೊಂದು ಕಡೆಯಲ್ಲಿ ಸಾರ್ವಜನಿಕರ ಹಿತದೃಷ್ಟಿಯನ್ನು ಕಾಪಾಡ ಬೇಕಾಗುತ್ತದೆ, ಮಾನ್ಯ ಮಂತ್ರಿಗಳು ಆ ಕೆಲಸವನ್ನು ಮಾಡಬೇಕಾಗುತ್ತದೆ, ಯಾರೇ ಇರಲಿ, ಯಾರೂ ದೊಡ್ಡವರಲ್ಲ. ಹೀಗೆ ಸರಕಾರದ ಹಣ ಸೋರಿಹೋಗುವುದಕ್ಕೆ ನೀವು ಬಿಡುವುದಾದರೆ ನೀವು ಅಲ್ಲಿ ಮಂತ್ರಿಗಳಾಗಿ ಏಕೆ ಇರಬೇಕು? ಯಾರದ್ದೋ ಒಬ್ಬರ ಪರವಾಗಿ ತೀರ್ಮಾನ ತೆಗೆದುಕೊಳ್ಳುವುದಾದರೆ ನೀವು ಏಕೆ ಮಂತ್ರಿಯಾಗಿ ಇರಬೇಕು?

ಶ್ರೀ ಹೆಚ್. ವಿಶ್ವನಾಥ್ :- ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾವುದೇ ಸರಕಾರದ ಹಣದ ಸೋರಿಕೆಯಿಲ್ಲ. ಅವರು ಹೇಳತಕ್ಕಂಥ ಏಳು ಕೋಟಿ ರೂ.ಗಳು ಶ್ರೀರಾಮ್ ಚಿಟ್‌ಫಂಡ್ ವಿಧಿಸಿದ ದಂಡವೇ ವಿನಹ ಅದು ಸರಕಾರದ ಬೊಕ್ಕಸದಿಂದ ಸೋರಿಹೋದಂಥ ಹಣವಲ್ಲ. ಆದ್ದರಿಂದ ಇಲ್ಲಿ ಸರಕಾರಕ್ಕೆ ಆಗಲಿ, ಸಾರ್ವಜನಿಕರಿಗೆ ಆಗಲಿ, ಯಾವುದೆ ಹಣದ ದುರುಪಯೋಗ, ಸೋರಿಕೆ ಆಗಿಲ್ಲ ಎನ್ನುವಂಥಾದ್ದನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು :- ಮುಂದಿನ ಪ್ರಶ್ನೆ. ಆತ್ಮಾನಂದರವರು ಕೇಳಿ...ಈಗಲೆ ಅರ್ಧಗಂಟೆ ಜಾಸ್ತಿಯಾಗಿದೆ.....

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಸಹಕಾರ ಕಾಯಿದೆಯಲ್ಲಿರುವುದು ನೀವು ನೋಡಿ.. ಪರಿಶೀಲನೆ ಮಾಡಿ..ಅವರು ಏಳು ಕೋಟಿ ರೂ ಹಣವನ್ನು ಕಟ್ಟಬೇಕು.

(ಗೊಂದಲ)

ವಿಶ್ವೇಶ್ವರಯ್ಯ ನಾಲಾ ಬಯಲಿನ ಪ್ರದೇಶದಲ್ಲಿ ಕಬ್ಬಿನ ಫಸಲನ್ನು ಉಳಿಸುವ ಬಗ್ಗೆ

207(2112) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್.ಎಸ್. ವ್ಯಾಪ್ತಿಯ ವಿಶ್ವೇಶ್ವರಯ್ಯ ನಾಲಾ ಬಯಲಿನ ಪ್ರದೇಶದಲ್ಲಿ, ಹಾಲಿ ಬೆಳೆದು ನಿಂತಿರುವ ಕಬ್ಬಿನ ಫಸಲಿಗೆ, ನೀರನ್ನು ದೊರಕಿಸಿ ಕೊಟ್ಟು, ಕಬ್ಬಿನ ಫಸಲನ್ನು ರಕ್ಷಣೆ ಮಾಡಿ ಫಸಲನ್ನು ಉಳಿಸುವುದಾಗಿ ಸರ್ಕಾರ ರೈತರಿಗೆ ಭರವಸೆ ನೀಡಿದೆಯೇ;

ಆ) ಹಾಗಿದ್ದಲ್ಲಿ, ಕೆ.ಆರ್.ಎಸ್.ನಲ್ಲಿ ನೀರಿನ ಸಂಗ್ರಹವಿಲ್ಲದೆ ಕಬ್ಬಿನ ಫಸಲಿಗೆ ನೀರು ಲಭ್ಯವಾಗದಿರುವ ಕಾರಣ, ಬೆಳೆಗಳು ಒಣಗಿ ನಾಶವಾಗುವ ಪರಿಸ್ಥಿತಿಯ ಹಂತಕ್ಕೆ ಬಂದು ತಲುಪಿರುವುದನ್ನು ಸರ್ಕಾರ ಮನಗಂಡಿದೆಯೇ;

ಇ) ಬೆಳೆಗಳ ವಿಫಲತೆಯಿಂದ ರೈತ ಸಂಕಷ್ಟಕ್ಕೆ ಸಿಲುಕಿದ್ದು, ಹಿಂದಿನ ಭರವಸೆ ರೀತ್ಯ ರೈತನ ಸಂಕಷ್ಟಕ್ಕೆ ನೆರವಾಗುವ ವಿಶೇಷ ಕಾರ್ಯಕ್ರಮ ರೂಪಿಸಿದ್ದಲ್ಲಿ, ಅದರ ಬಗೆಗಿನ ವಿವರಗಳೇನು?